# ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.
ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560027


ಸಂಖ್ಯೆ: ರೇರಾ/ಆಡಳಿತ/ಸಿಆರ್/05/2021-22 ದಿನಾಂಕ: 24.05.2021

ಇವರಿಗೆ,
ರಾಜ್ಯದ ಎಲ್ಲಾ ರಿಯಲ್ ಎಸ್ಟೇಟ್ ಅಭಿವೃದ್ಧಿದಾರರು.

ಮಾನ್ಯರೆ,

ವಿಷಯ: ರಿಯಲ್ ಎಸ್ಟೇಟ್ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಮತ್ತು ಸಿಬ್ಬಂದಿಗಳಿಗೆ ಕೊರೋನ ಲಸಿಕೆ ಹಾಕಿಸುವುದು, ಪಾಲಿಸಬೇಕಾದ ಕ್ರಮಗಳ ಬಗ್ಗೆ ತಿಳುವಳಿಕೆ / ತರಬೇತಿ ನೀಡುವುದು, ಐಸೋಲೇಶನ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಕಾರ್ಮಿಕರ ಮತ್ತು ಸಿಬ್ಬಂದಿ ಗಳ ಮಕ್ಕಳಿಗೆ ನೀಡಬಹುದಾದ ಸೂಚನೆಗಳ ಬಗ್ಗೆ.

ಉಲ್ಲೇಖ:
1. ಕೇಂದ್ರ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಾಲಯದ ಅರೆ ಸರ್ಕಾರಿ ಪತ್ರದ ದಿನಾಂಕ: 26.04.2021ರ ಸಂಖ್ಯೆ ಡಿಓ ನಂ: O-17024 / 50/2021- Housing –UD /EFS-1908644
2. ಸಮ ಸಂಖ್ಯೆಯ ದಿನಾಂಕ 06.05.2021 ಹಾಗೂ ದಿನಾಂಕ 17.5.2021ರ ರೇರಾ ಪ್ರಾಧಿಕಾರದ ಪತ್ರಗಳು
3. ದಿನಾಂಕ 17.05.2021ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ನಡೆಸಿದ ಗೂಗಲ್ ಮೀಟ್‌ನಲ್ಲಿ Virtual Meeting ನಡೆಸಿದ ಬಗ್ಗೆ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರ ಭಾರತ ಸರ್ಕಾರದ ಸೂಚನೆಯಂತೆ ಉಲ್ಲೇಖ-2ರಲ್ಲಿ ತಿಳಿಸಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ವಿವಿಧ ದಿನಾಂಕಗಳ ಪತ್ರಗಳ ಕಡೆಗೆ ತಮ್ಮ ಗಮನವನ್ನು ಸೆಳೆಯಲಾಗಿದೆ.

ಉಲ್ಲೇಖ-3ರಲ್ಲಿ ತಿಳಿಸಿರುವಂತೆ ದಿನಾಂಕ 17.5.2021ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಮಾನ್ಯ ವಿಶ್ರಾಂತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ನಡೆಸಿದ ಸಭೆಯಲ್ಲಿ ನೀಡಿದ ನಿರ್ದೇಶನದಂತೆ ಕರ್ನಾಟಕ ಸರ್ಕಾರದ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಪ್ರಸ್ತುತ ಹಬ್ಬಿರುವ ಕೋವಿಡ್-19ರ ಈ ಅವಧಿಯಲ್ಲಿ ಕಟ್ಟಡದ ನಿರ್ಮಾಣ ಕಾರ್ಮಿಕರ ಮಕ್ಕಳ ರಕ್ಷಣೆಯ ಕುರಿತಂತೆ ಹಲವು ಸೂಚನೆಗಳನ್ನು ನೀಡಿದ್ದು, ಆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ನಿರ್ದೇಶನ ನೀಡಿರುತ್ತದೆ. ಸದರಿ ಸೂಚನೆಗಳು ಈ ಕೆಳಕಂಡಂತಿವೆ.


ದೂರವಾಣಿ ಸಂಖ್ಯೆ:080-22249798/ 22249799, ಇ-ಮೇಲ್: info.rera@karnataka.gov.in ವೆಬ್‌ಸೈಟ್: rera.karnataka.gov.in

**DURING THE COVID PANDEMIC:**

A) A child in need of care, protection and rehabilitation.

B) Children who have lost both their parents due to covid or other reasons.

C) Children expressing severe anxiety / loneliness or boredom.

**IF THESE CHILDREN ARE FOUND, PLEASE CALL**

**1098 / 14499**

**(14499 will be available from 8 am to 8 pm)**

ಮೇಲೆ ತಿಳಿಸಿರುವ ಅಂಶಗಳ ಜೊತೆಗೆ ಕಟ್ಟಡ ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ಶೌಚಾಲಯ ಸೌಲಭ್ಯವನ್ನು ತಪ್ಪದೇ ಕಡ್ಡಾಯವಾಗಿ ಅಳವಡಿಸುವಂತೆ ತಿಳಿಸಲಾಗಿದೆ. ಮುಂದುವರೆದು, ಮಕ್ಕಳ ಹಿತರಕ್ಷಣೆಯ ಬಗ್ಗೆ ಮೇಲೆ ತಿಳಿಸಿರುವ ಸಹಾಯವಾಣಿ ಸಂಖ್ಯೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದೆಂದು ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ನೀಡಿದ ನಿರ್ದೇಶನದಂತೆ ಮುಂದಿನ ಅಗತ್ಯ ಕ್ರಮ ಕೈಗೊಂಡು ಹಾಗೂ ತಾವು ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಕಛೇರಿಗೆ ತಕ್ಷಣ ಒದಗಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

24.05.2021

(ಎಲ್.ಎಸ್. ಶ್ರೀಕಂಠಬಾಬು)
ಉಪ ಕಾರ್ಯದರ್ಶಿ,
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಪ್ರತಿ:

1. ಸದಸ್ಯ-ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಸಿದ್ದಯ್ಯ ರಸ್ತೆ, ಬೆಂಗಳೂರು.

2. ಮುಖ್ಯ ಕಾರ್ಯನಿರ್ವಹಕ ಅಧಿಕಾರಿ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಹಕ ಅಧಿಕಾರಿ, ಕ್ರೆಡಯ್, ಬೆಂಗಳೂರು.

<u>ಪ್ರತಿ ಮಾಹಿತಿಗಾಗಿ:</u>

1. ಸರ್ಕಾರದ ಕಾರ್ಯದರ್ಶಿ ಅವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು ರವರಿಗೆ ಕಳುಹಿಸುತ್ತಾ ಮಾನ್ಯ ಕಾರ್ಯದರ್ಶಿ ಅವರ ಅವಗಾಹನೆಗೆ ತರಲು ಕೋರಿದೆ.
2. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿ, ರೇರಾ, ಮಾನ್ಯ ಅಧ್ಯಕ್ಷರ ಅವಗಾಹನೆಗೆ ತರಲು ಕೋರಿದೆ.
3. ಮಾನ್ಯ ಸದಸ್ಯರು- 1 ರವರ ಆಪ್ತ ಸಹಾಯಕರು, ಮಾನ್ಯ ಸದಸ್ಯರ ಅವಗಾಹನೆಗೆ ತರಲು ಕೋರಿದೆ.
4. ಮಾನ್ಯ ಸದಸ್ಯರು-2 ರವರ ಆಪ್ತ ಸಹಾಯಕರು, ಮಾನ್ಯ ಸದಸ್ಯರ ಅವಗಾಹನೆಗೆ ತರಲು ಕೋರಿದೆ.
5. ಕಾರ್ಯದರ್ಶಿಯವರ ಆಪ್ತ ಸಹಾಯಕರು, ರೇರಾ, ಕಾರ್ಯದರ್ಶಿಯವರ ಅವಗಾಹನೆಗೆ ತರಲು ಕೋರಿದೆ.